**ತನ್ನ ಮುಖದಿಂದಲೇ ಕಥೆಯಾದ, ದಂತಕಥೆಯಾದ, ಅಪೂರ್ವ ಕವಿತೆಯಾದ ಚಲನಚಿತ್ರ ತಾರೆ ಗ್ರೇಟಾ ಗಾರ್ಬೊ. ಈ ಸ್ವೀಡಿಷ್ – ಅಮೆರಿಕನ್ ಅಭಿನೇತ್ರಿ ನಟಿಸಿದ್ದು ಏಳು ಚಿತ್ರಗಳಲ್ಲಿ; ಪ್ರತಿಯೊಂದೂ ಮಳೆಬಿಲ್ಲಿನ ರಂಗಿನಷ್ಟು ಅನನ್ಯ, ಮೋಹಕ. ಜನಪ್ರಿಯತೆಯ ತುತ್ತತುದಿಯಲ್ಲಿರುವಾಗಲೇ ಸಿನಿಮಾದಿಂದ ದೂರ ಸರಿದ ಗ್ರೇಟಾಳದು ಮನುಕುಲ ಮರೆಯಲಾಗದ ಮುಖಗಳಲ್ಲೊಂದು.**

■ ಎಸ್. ದಿವಾಕರ್

# ಗ್ರೇಟಾ ಗಾರ್ಬೊ
## ಮುಖವೇ ಕಥೆ, ಕವಿತೆ

ನಾವು ದಿನನಿತ್ಯ ಅದೆಷ್ಟು ಜನರ ಮುಖಗಳನ್ನು ನೋಡುವುದಿಲ್ಲ? ಅವುಗಳಲ್ಲಿ ಒಂದಾದರೂ ಮುಖ ತನ್ನ ಭಾವಪ್ರಕಾಶದಿಂದಲೋ ಅಪೂರ್ವ ಸೊಬಗಿನಿಂದಲೋ ನಮ್ಮ ಮನಸ್ಸಿನಲ್ಲಿ ಉಳಿದುಬಿಟ್ಟರೆ ಅದು ನಮ್ಮ ಪುಣ್ಯ. ಚಿತ್ರ, ಶಿಲ್ಪ ಕಲೆಗಳಲ್ಲಿ ಮುಖಗಳ ಪುನರಾವರ್ತನೆ ಹೊಸದೇನಲ್ಲ. ಪಹಾಡಿ ಚಿಕಣಿ ಚಿತ್ರಗಳ ನಾಯಿಕೆ, ಬುದ್ಧನ ಶಿಲಾಪ್ರತಿಮೆ, ಯಾಮಿನಿ ರಾಯ್ ಅವರು ಚಿತ್ರಿಸಿದ ದೊಡ್ಡ ದೊಡ್ಡ ಕಣ್ಣುಗಳ ಮುಗ್ಧೆ, ಎಂ.ಎಫ್. ಹುಸೇನರ ಇಂದಿರಾ ಗಾಂಧಿ, ಇಂಥಲ್ಲೆಲ್ಲ ಎದ್ದು ಕಾಣುವುದು ಮುಖವೇ. ವಸ್ತುವೊಂದನ್ನು ಅತಾರ್ಕಿಕವಾಗಿ ಪುನರಾವರ್ತನೆಗೊಳಿಸುವುದರಿಂದಲೇ ಅದಕ್ಕೆ ಒಂದು ಬಗೆಯ ಅತೀಂದ್ರಿಯ ಗುಣವೋ ನಿಗೂಢ ಶಕ್ತಿಯೋ ಪ್ರಾಪ್ತವಾಗುವುದುಂಟು. ಅದಕ್ಕೇ ಇರಬೇಕು, ಕೆಲವು ಮುಖಗಳು ಕೆಲವು ಸಂದರ್ಭಗಳಲ್ಲಿ ಮತ್ತೆ ಮತ್ತೆ ನೋಡಿದಷ್ಟೂ ಮೋಹಕವಾಗಿರುತ್ತವೆ.

ಕೆಲವೊಂದು ಕಲಾಕೃತಿಗಳ ಮುಖ ನಮ್ಮನ್ನು ಮೋಡಿ ಮಾಡುತ್ತದೆ, ನಿಜ. ಆದರೆ ಸಿನಿಮಾದಂಥ ಕಲೆಯಲ್ಲಿ ನಾವು ನೋಡುವ ಎಲ್ಲ ಮುಖಗಳೂ ಮೋಡಿ ಮಾಡುತ್ತವೆ ಎನ್ನಲಾಗದು. ನಿಜಜೀವನದಲ್ಲಿ ಸಹಜವಾಗಿರುವ ಆ ಮುಖಗಳು ಸಿನಿಮಾದಲ್ಲಿ ತುಸು ರೂಪಾಂತರಗೊಳ್ಳುವುದರಿಂದಲೋ ಏನೊ, ಬಹುಮಟ್ಟಿಗೆ ತಮ್ಮ ಸ್ವಭಾವವಿಶೇಷಗಳನ್ನು ಕಳೆದುಕೊಂಡಿರುತ್ತವೆ. ಆದರೆ ಸಿನಿಮಾದಲ್ಲೂ ತಮ್ಮ ಸಹಜತೆ ಕಳೆದುಕೊಳ್ಳದೆ ಅತ್ಯಾಕರ್ಷಕವಾಗಿಯೇ ಉಳಿದಿರುವ ಕೆಲವು ಮುಖಗಳುಂಟು. ನನ್ನ ದೃಷ್ಟಿಯಲ್ಲಿ ಅಂಥ ಕೆಲವು ಮುಖಗಳೆಂದರೆ ಸತ್ಯಜಿತ್ ರಾಯ್ ನಿರ್ದೇಶಿಸಿರುವ 'ಚಾರುಲತಾ' ಸಿನಿಮಾದ ಮಾಧವಿ ಮುಖರ್ಜಿ, ಬಸು ಚಟರ್ಜಿಯವರ 'ರಜನಿಗಂಧಾ'ದ ವಿದ್ಯಾ ಸಿನ್ಹ, ಕಪ್ಪು–ಬಿಳುಪು ಚಿತ್ರಗಳ ಕಾಲದ ಸ್ಮಿತಾ ಪಾಟೀಲ್ ಮತ್ತು ಸ್ವಲ್ಪ ನಮ್ಮವರೇ ಆದ ಕಲ್ಪನಾ. ಆದರೆ ತನ್ನ ಮುಖದಿಂದ ಇವರೆಲ್ಲರನ್ನೂ ಮೀರಿಸಿ, ಇಂದಿಗೂ ಒಂದು ದಂತಕತೆಯಾಗಿರುವ ಚಲನಚಿತ್ರ ತಾರೆಯೆಂದರೆ ಗ್ರೇಟಾ ಗಾರ್ಬೊ.

ಗ್ರೇಟಾ ಲೂಸಿಯಾ ಗುಸ್ತಾವ್‌ಸನ್ ಗಾರ್ಬೊ ಹುಟ್ಟಿದ್ದು ಆಗಸ್ಟ್ 1906ರಲ್ಲಿ, ಸ್ಟಾಕ್‌ಹೋಮಿನಲ್ಲಿ. ಸ್ವೀಡಿಷ್/ಅಮೆರಿಕನ್ ಸಿನಿಮಾ ತಾರೆಯಾಗಿ ಹೆಸರಾದ ಈಕೆ ಮೊದಲು ಅಭಿನಯಿಸಿದ ಚಿತ್ರ 'ದಿ ಅಟೋನ್‌ಮೆಂಟ್ ಆಫ್ ಗ್ಯೋಸ್ಟಾ ಬರ್ಲಿಂಗ್' (1924). ಅದನ್ನು ನಿರ್ದೇಶಿಸಿದವನು ಸ್ವೀಡಿಷ್ ನಿರ್ದೇಶಕ ಮೌರಿಟ್ಜ್ ಸ್ಟಿಲ್ಲರ್. ರಂಗಭೂಮಿಯ ನಿಕಟ ಸಂಪರ್ಕವಿದ್ದ ಆತ ಮೊದಮೊದಲು ನಿದೇಶಿಸಿದ್ದು 'ಲೌವ್ ಅಂಡ್ ಜರ್ನಲಿಸಂ', 'ಥಾಮಸ್ ಗ್ರಾಡ್ಸ್ ಬೆಸ್ಟ್ ಫಿಲ್ಮ್'ಗಳಂಥ ಹಾಸ್ಯಪ್ರಧಾನ ಮೂಕಿ ಚಿತ್ರಗಳನ್ನು. ಆಮೇಲೆ ಅವನೇ ಅವಳನ್ನು ಹಾಲಿವುಡ್‌ಗೆ ಕರೆದುಕೊಂಡು ಹೋದ. ಅಲ್ಲಿ ಅವಳ ನಿಗೂಢವೆನ್ನಿಸುವ ಚೆಲುವು ಅವಳನ್ನು ಹಾಲಿವುಡ್ಡಿನ ಇತರ ಸುಂದರಿಯರಿಂದ ಪ್ರತ್ಯೇಕವಾಗಿ ನಿಲ್ಲಿಸಿತು. ಆಕೆ ಮೋಹಿನಿಯಂತಲ್ಲ. ಹಾಗೆ ನೋಡಿದರೆ, ಅವಳನ್ನು ಇಷ್ಟಪಟ್ಟವರು ಗಂಡಸರಿಗಿಂತ ಹೆಂಗಸರೇ. ತುಸು ಗೊಗ್ಗರಿನಂತೆ ಕೇಳಿಸುತ್ತಿದ್ದ ಆಕೆಯ ದನಿ 1930ರಲ್ಲಿ 'ಆನಾ ಕ್ರಿಸ್ಟೀ' ಚಿತ್ರದ ಮೂಲಕ ಮೂಕಿಯಿಂದ ವಾಕ್ಚಿತ್ರಕ್ಕೆ ಸಾಗಿತು. ಆಕೆಯ ಏಕಾಂತ ವ್ಯಕ್ತಿತ್ವವನ್ನು ಅತಿಶಯಗೊಳಿಸಿದ ಹಾಲಿವುಡ್ 'ಗಾರ್ಬೊ ಮಾತಾಡುತ್ತಾಳೆ' ಎಂದು ಸಾರಿತು. ಅವಳು ಅಭಿನಯಿಸಿದ 'ಮಾತಾಹರಿ' (1931), 'ಗ್ರ್ಯಾಂಡ್ ಹೋಟೆಲ್' (1932), 'ಕ್ಯಾಮಿಲ್' (1934) ಮುಂತಾದ, ರೊಮಾನ್ಸ್ ಎನ್ನಬಹುದಾದ ಚಿತ್ರಗಳಲ್ಲಿ ತುಸುವೇ ದುರಂತವಿತ್ತು. ಆದರೆ 1935ರಲ್ಲಿ ಅಭಿನಯಿಸಿದ 'ಆನಾ ಕರೇನಿನ್' ಚಿತ್ರ ನಿಜಕ್ಕೂ ದುರಂತಮಯ. ನಾಲ್ಕು ವರ್ಷಗಳ ನಂತರ ಬಿಡುಗಡೆಗೊಂಡದ್ದು 'ನಿನೋಚ್ಕ' (1939) ಎಂಬ ವಾಕ್ಚಿತ್ರ. ಅದಕ್ಕೆ 'ಗಾರ್ಬೊ ನಗುತ್ತಾಳೆ' ಎಂದು ಸಾರುವ ಜಾಹೀರಾತು. ಆಮೇಲೆ ಚಿತ್ರರಂಗದಿಂದ ಸಂಪೂರ್ಣವಾಗಿ ದೂರಸರಿದ ಆಕೆ ಸದಾ ಕುತೂಹಲವುಂಟುಮಾಡುತ್ತಿದ್ದ ತನ್ನದೇ ಖಾಸಗಿ ಜೀವನಕ್ಕೆ ಮರಳಿದಳು. ಸಿನಿಮಾದಲ್ಲಿ ಅವಳು ಉಳಿಸಿಹೋದ ಅತ್ಯಂತ ಉಜ್ವಲವಾದ ಪ್ರತಿಮೆಯನ್ನು 'ಸಾವು ಸೋಂಕದ', 'ಅಜರಾಮರ' ಎಂಬಂಥ ಮಾತುಗಳು ವಿವರಿಸಲಾರವು.

ಗಾರ್ಬೊ ಎಂಥ ಸೆಲೆಬ್ರಿಟಿಯಾದಳೆಂದರೆ ಅವಳು ಅಭಿನಯಿಸಿದ ಕ್ವೀನ್ ಕ್ರಿಸ್ಟೀನಾ ಅಥವಾ ಮಾರಿ ವಾಲ್ಯೂಸ್ಕಾ ಮೊದಲಾದ ಐತಿಹಾಸಿಕ ಪಾತ್ರಗಳ ಜನಪ್ರಿಯತೆಯನ್ನು ಕೂಡ ಮರೆಮಾಡುವಷ್ಟು. ಜನಪ್ರಿಯತೆಯ ತುತ್ತತುದಿಯಲ್ಲಿರುವಾಗಲೇ ಸಿನಿಮಾದಿಂದ ದೂರ ಸರಿದ, ಮತ್ತೆಂದೂ ಆ ಕ್ಷೇತ್ರಕ್ಕೆ ಹಿಂತಿರುಗದ ಅವಳ ತೀರ್ಮಾನ ಕೂಡ ಅವಳ ಪ್ರಖ್ಯಾತಿಯ ಪ್ರಭಾವಳಿಯನ್ನು ಮಂಕುಗೊಳಿಸಲಿಲ್ಲ. ಹಾಗೆ ನೋಡಿದರೆ ಆಕೆ ಸಿನಿಮಾಕ್ಕೆ ಹಿಂತಿರುಗಬೇಕಾದ ಅಗತ್ಯವೇ ಇರಲಿಲ್ಲ. ಯಾಕೆಂದರೆ ಅದನ್ನವಳು ಬಿಟ್ಟು ಹೋದವಳೇ ಅಲ್ಲ! ಸ್ವಿಟ್ಜರ್‌ಲೆಂಡಿನ ಒಂದು ವಿಲ್ಲಾದಲ್ಲೋ ನ್ಯೂಯಾರ್ಕಿನ ಒಂದು ಅಪಾರ್ಟ್‌ಮೆಂಟಿನಲ್ಲೋ ಏಕಾಂಗಿಯಾಗಿ, ನಿಸ್ಸಂಗಿಯಾಗಿ ಬದುಕುತ್ತಿದ್ದ ಆಕೆ ಆಗಾಗ ನ್ಯೂಯಾರ್ಕಿನ ಫಿಫ್ತ್ ಅವೆನ್ಯೂದಲ್ಲಿ ಕಾಣಿಸಿಕೊಳ್ಳುತ್ತಿದ್ದಳು, ಅಪರೂಪದ ಹಕ್ಕಿಯೊಂದು ಕಾಣಿಸಿಕೊಂಡಂತೆ.

ಅವಳ ಅಭಿನಯದ ಏಳು ಚಿತ್ರಗಳನ್ನು ನಿರ್ದೇಶಿಸಿದ ಕ್ಲಾರೆನ್ಸ್ ಬ್ರೌನ್, 'ಅತ್ಯಾಕರ್ಷಣೆಗೆ ಅರ್ಥವೇನಾದರೂ ಇದ್ದರೆ ಅದು ಅವಳೇ' ಅಂದ. ಅವಳದು ಶಬ್ದಗಳಲ್ಲಿ ಸೆರೆಹಿಡಿಯಬೇಕೆಂಬ ಎಲ್ಲ ಪ್ರಯತ್ನಗಳನ್ನೂ ಧಿಕ್ಕರಿಸಿದ ಮೋಹಕತೆ. ಹಾಲಿವುಡ್ಡಿನ ಮಹಾ ಮಹಾ ಕ್ಯಾಮೆರಾಮನ್ನರು ಯಾವ ಯಾವ ಮುಖದ ಶೋಭೆಯನ್ನು